# Office of the Chief Electoral Officer, Karnataka

Nirvachana Nilaya, Sheshadri Road, Bangalore-560 001.

ದಿನಾಂಕ: 02.11.2014

**ಪತ್ರಿಕಾ ಪ್ರಕಟಣೆ**

## ಮತದಾರರ ಪಟ್ಟಿಯ ವಾರ್ಷಿಕ ಪರಿಷ್ಕರಣೆ 2015

### ಕ್ಲೇಮ್ಸ್ ಹಾಗೂ ಆಕ್ಷೇಪಣೆಗಳನ್ನು ನವೆಂಬರ್ 25, 2014ರ ಒಳಗಾಗಿ ಸಲ್ಲಿಸಬಹುದು .

ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2015 ಪ್ರಕಟಿಸಿದೆ. ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳ ಮತದಾರರ ಕರಡು ಪಟ್ಟಿಯನ್ನು 30ನೇ ಅಕ್ಟೋಬರ್ 2014ರಂದು ಪ್ರಕಟಿಸಲಾಗಿದೆ. ಮತದಾರರ ಪಟ್ಟಿಗಳು ತಾಲ್ಲೂಕು ಕಛೇರಿ / ನಗರ ಸಭೆ ವಾರ್ಡ್ ಕಛೇರಿ / ಬಿಬಿಎಂಪಿ ಕಂದಾಯ ಅಧಿಕಾರಿಗಳ ಕಛೇರಿಗಳಲ್ಲಿ ಲಭ್ಯವಿರುತ್ತವೆ.

ಮತದಾರರು ಕರಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೆ ಎಂಬ ಬಗ್ಗೆ ಪರಿಶೀಲಿಸಿಕೊಳ್ಳಲು ಕೋರಿದೆ. ಮತದಾರರು www.ceokarnataka.kar.nic.in ವೆಬ್‌ಸೈಟ್‌ನಲ್ಲಿಯೂ ಸಹ ತಮ್ಮ ಹೆಸರನ್ನು ನೋಡಿಕೊಳ್ಳಬಹುದು.

ದಿನಾಂಕ: 01.01.2015 ರಂದು 18 ವರ್ಷ ಪೂರ್ಣಗೊಳ್ಳುವ, ಕರ್ನಾಟಕದಲ್ಲಿ ವಾಸಿಸುತ್ತಿರುವ ಎಲ್ಲಾ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಅರ್ಹರಾಗಿರುತ್ತಾರೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಬಿಟ್ಟು ಹೋಗಿದ್ದರೆ ಅಥವಾ ಹೊಸದಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಮತದಾರರು **ಅರ್ಜಿನಮೂನೆ – 6**ನ್ನು ಭರ್ತಿಮಾಡಿ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಜನ್ಮದಿನಾಂಕ ಪ್ರಮಾಣ ಪತ್ರದ ಪ್ರತಿ ಹಾಗೂ ಮನೆಯ ವಿಳಾಸದ ಪ್ರಮಾಣ ಪತ್ರದ ಪ್ರತಿಯನ್ನು ಸಂಬಂದಪಟ್ಟ ಮತಗಟ್ಟೆ ಹಂತದ ಅಧಿಕಾರಿಗಳು / ತಾಲ್ಲೂಕು ಕಛೇರಿ / ನಗರ ಸಭೆ ವಾರ್ಡ್ ಕಛೇರಿ / ಬಿಬಿಎಂಪಿ ಕಂದಾಯ ಅಧಿಕಾರಿಗಳ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಮತದಾರರು ಒಂದು ಮತಗಟ್ಟೆ ವ್ಯಾಪ್ತಿಯಿಂದ ಬೇರೊಂದು ಮತಗಟ್ಟೆ ವ್ಯಾಪ್ತಿಗೆ ಆದರೆ ಒಂದೇ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸ್ಥಳಾಂತರಗೊಂಡಿದ್ದಲ್ಲಿ **ಅರ್ಜಿನಮೂನೆ – 8ಎ** ನ್ನು ಅಗತ್ಯ ದಾಕಲಾತಿಗಳೊಂದಿಗೆ ಸಲ್ಲಿಸಬೇಕು. ಮತದಾರರು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಬೇರೊಂದು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸ್ಥಳಾಂತರಗೊಂಡಿದ್ದಲ್ಲಿ ಅಂತಹವರು **ಅರ್ಜಿನಮೂನೆ – 6**ನ್ನು ಸಲ್ಲಿಸಬೇಕು ಹಾಗೂ ಅರ್ಜಿನಮೂನೆ – 6ರಲ್ಲಿನ ಭಾಗ IV ರಲ್ಲಿ ಘೋಷಣೆಯನ್ನು ಕಡ್ಡಾಯವಾಗಿ ಭರ್ತಿಮಾಡತಕ್ಕದ್ದು.

ಕರಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು, ವಿಳಾಸ, ವಯೋಮಿತಿ, ಸಂಬಂದ ಅಥವಾ ಇನ್ನಾವುದೇ ಮಾಹಿತಿಯ ಲೋಪಗಳನ್ನು ಸರಿಪಡಿಸಲು **ಅರ್ಜಿನಮೂನೆ – 8**ನ್ನು ಸಲ್ಲಿಸಬೇಕು.

ಒಂದಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೊಂದಾಯಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದ್ದರಿಂದ ಮತದಾರರು ಒಂದೇ ವಿಧಾನಸಭಾ ಮತಕ್ಷೇತ್ರದಲ್ಲಿ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ತೆಗೆದುಹಾಕಲು **ಅರ್ಜಿನಮೂನೆ – 7ನ್ನು** ಸಲ್ಲಿಸಲು ಕೋರಿದೆ. ಮತದಾರರ ಪಟ್ಟಿಯಲ್ಲಿ ಯಾವುದೇ ಹೆಸರಿನ ಸೇರ್ಪಡೆಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು **ಅರ್ಜಿನಮೂನೆ – 7ನ್ನು** ಸಲ್ಲಿಸಬಹುದು.

ಈ ವಿಶೇಷ ಪರಿಷ್ಕರಣೆಗಾಗಿ ಕೇಮ್ಸ್ ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು 25 ನವಂಬರ್ 2014 ಅಂತಿಮ ದಿನವಾಗಿರುತ್ತದೆ. ಅಂತಿಮ ಮತದಾರರ ಪಟ್ಟಿಗಳನ್ನು 2015 ಜನವರಿ ಮಾಹೆಯಲ್ಲಿ ಪ್ರಕಟಿಸಲಾಗುವುದು.

ಮತದಾರರು **http://www.voterreg.kar.nic.in** ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕವೂ ನೊಂದಾಯಿಸಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗೆ www.ceokarnataka.kar.nic.in ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ದೂರವಾಣಿ ಸಂಖ್ಯೆ: 1950 (ಟೋಲ್‌ಫ್ರೀ)ಗೆ ಕರೆಮಾಡಬಹುದು.

ಅನಿಲ್ ಕುಮಾರ್ ಝಾ
ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ.